ಭಾರತೀಯ ಜನತಾ ಪಾರ್ಟಿ

11, ಅಶೋಕ ರಸ್ತೆ, ನವದೆಹಲಿ - 110001

**Phone-011-23005700, Fax-011-23005787**

**ಭಾಜಪ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಅವರು**

**ಫೆಬ್ರವರಿ 07, 2013ರಂದು ಚೆನ್ನೈನಲ್ಲಿ ನೀಡಿದ ಹೇಳಿಕೆ**

**ಯುಪಿಎ ರಾಜಕಾರ್ಯ ಸಂಪೂರ್ಣ ಹದಗೆಟ್ಟಿದೆ**

ರಾಯಭಾರ ನೀತಿ ಹಾಗೂ ತಂತ್ರ ನೈಪುಣ್ಯತೆಯಲ್ಲಿ ಯುಪಿಎ ಸರ್ಕಾರದ ಕಾರ್ಯದಾಖಲೆ ಕಳೆಕುಂದಿರುವುದಲ್ಲದೆ, ಅಸ್ಪಷ್ಟ ಹಾಗೂ ಅಸ್ಥಿರವಾಗಿದೆ. **ಕಳೆದ ಎಂಟು ವರ್ಷಗಳಿಂದ ಅಥವಾ ಏನೋ, ಯುಪಿಎ ಸರ್ಕಾರದ ದೃಢ ನಿಶ್ಚಯ ಹಾಗೂ ಕಾರ್ಯಸಾಧನಾ ಕ್ಷಮತೆಯ ಕೊರೆತೆಯಿಂದ ಸರಿಸುಮಾರು ಎಲ್ಲಾ ನೆರೆ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಂಬಂಧವು ಸಂಕುಚಿತಗೊಂಡಿದೆ.**

**ಇನ್ನೊಂದೆಡೆ ಪಾಕಿಸ್ತಾನವು ಚೀನಾದೊಂದಿಗೆ ಸೇರಿಕೊಂಡು ಭಾರತದ ತಾಂತ್ರಿಕ ಹಿತಾಸಕ್ತಿಯ ವಿರುದ್ಧ ಕಾರ್ಯವಹಿಸುತ್ತಿದೆ. ಇತ್ತೀಚೆಗಷ್ಟೆ, ತನ್ನ ಗ್ವದಾರ್ ಬಂದರಿನ ನಿರ್ವಹಣಾ ನಿಯಂತ್ರಣವನ್ನು ಚೀನಾ ಕೈಗೆ ಒಪ್ಪಿಸಿದ್ದು, ಅರಬ್ಬಿ ಸಮುದ್ರ ವ್ಯಾಪ್ತಿಯಲ್ಲಿ ಭದ್ರ ಬುನಾದಿ ಹಾಕಲು ಇದರಿಂದ ಅದಕ್ಕೆ ಸಾಧ್ಯವಾಗಿದೆ. ಶ್ರೀಲಂಕಾ ರಾಜ್ಯವು ಸಾಂಪ್ರದಾಯಿಕವಾಗಿ ಮಿತ್ರರಾಷ್ಟ್ರವಾಗಿದ್ದರೂ, ಹಂಬನತೋಟಾ ಎಂಬ ಹೆಸರಿನ ಬಂದರನ್ನು ಚೀನಾ ಪಾಲುಗಾರಿಕೆಯೊಂದಿಗೆ ಅಭಿವೃದ್ಧಿ ಪಡಿಸುವ ವಿಚಾರಕ್ಕೆ ಸಮ್ಮತಿಸಿದೆ.**

ಶ್ರೀಲಂಕಾ ರಾಷ್ಟ್ರವು ಭಾರತದೊಂದಿಗೆ ಸ್ವಾರಸ್ಯಕರ ಐತಿಹಾಸಿಕ ದ್ವಿಪಕ್ಷೀಯ ಸಂಬಂಧವನ್ನು ಹೊಂದಿದೆ. ಜನಾಂಗೀಯ ತಮಿಳರ ವಿಚಾರದಲ್ಲಿ ಯುಪಿಎ ಸರ್ಕಾರ ಹಲವಾರು ವಿಚಾರಗಳಲ್ಲಿ ಉದಾರತೆ ಪ್ರದರ್ಶಿಸಿದ್ದು, ಆ ರಾಷ್ಟ್ರ ಎದುರಿಸುತ್ತಿರುವ ಯುದ್ಧ ಅಪರಾಧಗಳ ಬಗ್ಗೆ ಉದ್ಭವಿಸಿದ ಅಂತಾರಾಷ್ಟ್ರೀಯ ಒತ್ತಡವನ್ನು ತಗ್ಗಿಸಲು ಸಹ ತನ್ನ ನೆರವು ಒದಗಿಸಿದೆ. ಸಶಸ್ತ್ರಪಡೆಗಳ ಯುದ್ಧ ಅಪರಾಧಗಳ ಆರೋಪಗಳನ್ನು ಪರಿಶೀಲಿಸಿ ಸೂಕ್ತ ಶಿಕ್ಷೆ ಸೂಚಿಸಲು, ಕಲಿತ ಪಾಠ ಹಾಗು ಸಂಧಾನ ಆಯೋಗ ಎಲ್ಎಲ್ಆರ್‌ಸಿ ಎಂಬ ತಜ್ಞರ ಸಮೂಹವನ್ನು ಶ್ರೀಲಂಕಾ ಸ್ಥಾಪಿಸಿತ್ತು. ಎಲ್ಎಲ್ಆರ್‌ಸಿ ತನ್ನ ವರದಿ ಒಪ್ಪಿಸಿ ಎರಡು ವರ್ಷಗಳು ಗತಿಸಿದರು ಈವರೆಗು ಯಾವುದೇ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ.

ಸಂವಿಧಾನದ 13ನೇ ತಿದ್ದುಪಡಿ ತರುವ ಮೂಲಕ ತಮಿಳು ಪ್ರದೇಶಗಳಿಗೆ ಸ್ಥಳೀಯ ಅಧಿಕಾರ ನೀಡುವ ವಾಗ್ದಾನ ಶ್ರೀಲಂಕಾ ಸರ್ಕಾರ ನೀಡಿತ್ತು. **ಸರ್ವಾಂಗೀಣ ರಾಜಕಾರಣ ಹಾಗೂ ಪುನರ್ವಸತಿ ಯತ್ನಗಳಿಗೆ ಉತ್ತೇಜನ ನೀಡುವ 13ನೇ ತಿದ್ದುಪಡಿ ಅಂಗೀಕಾರವಾಗುವುದೆಂಬ ಒತ್ತಾಸೆಯನ್ನು ಯುಪಿಎ ಸರ್ಕಾರ ಹೊಂದಿತ್ತು. ಆದರೆ ಇಂದು ಶ್ರೀಲಂಕಾ ಸರ್ಕಾರ ಇಂತಹ ಯಾವುದೇ ಕ್ರಮಗಳಿಗೆ ಬದ್ಧತೆ ತೋರದೆ ಪ್ರಸ್ತಾಪವನ್ನೇ ತಳ್ಳಿಹಾಕಿದೆ. ಇದೊಂದು ಯುಪಿಎ ಸರ್ಕಾರದ ಬಹು ದೊಡ್ಡ ರಾಜತಾಂತ್ರಿಕ ವೈಫಲ್ಯ.**

**ಶ್ರೀಲಂಕಾದ ತಮಿಳರಿಗೆ ಪುನರ್ವಸತಿ, ಪರಿಹಾರ ಕೊಡಿಸಿ, ಅವರನ್ನು ಸಶಕ್ತರನ್ನಾಗಿಸಲು ಬೇಕಾದ ಅಗತ್ಯ ಕ್ರಮಗಳನ್ನು ಆರಂಭಿಸಬೇಕೆಂದು ಒತ್ತಾಯಿಸಲು, ರಾಜತಾಂತ್ರಿಕ ಯತ್ನಗಳನ್ನು ತಕ್ಷಣ ಆರಂಭಿಸಬೇಕು ಎಂದು ಪ್ರಧಾನಿಗಳನ್ನು ಭಾಜಪ ಆಗ್ರಹಿಸುತ್ತದೆ.**

**ಪಾಲ್ಕ ಸ್ಟ್ರೇಟ್ ಪ್ರದೇಶದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಮೀನುಗಾರಿಕೆಯಲ್ಲಿ ತೊಡಗಿರುವ ತಮಿಳುನಾಡಿನ ಮೀನಗಾರರಿಗೆ ಭದ್ರತೆ ಒದಗಿಸುವ ವಿಚಾರವನ್ನೂ ಸಹ ಯುಪಿಎ ಸರ್ಕಾರ ಸೂಕ್ತ ವೇದಿಕೆಯಲ್ಲಿ ಎತ್ತಬೇಕು. ಕಳೆದ ಹಲವು ವರ್ಷಗಳಿಂದ ಈ ರೈತರು ನಿರಂತರ ಕಿರುಕುಳಕ್ಕೆ ಒಳಗಾಗುತ್ತಿದ್ದು,ಶ್ರೀಲಂಕಾ ನೌಕಾಪಡೆಯ ಕಾರ್ಯಾಚರಣೆಯಿಂದ ಹತರಾಗಿರುವ ಉದಾಹರಣೆಗಳೂ ಇವೆ.** ನಮ್ಮ ಮೀನುಗಾರರ ರಕ್ಷಣೆ ಹಾಗೂ ಭದ್ರತೆಯನ್ನು ಯುಪಿಎ ಸರ್ಕಾರ ಕಾಪಾಡಲು, ಶ್ರೀಲಂಕಾ ಸರ್ಕಾರವನ್ನು ರಾಜತಾಂತ್ರಿಕ ಮಾರ್ಗಗಳ ಮೂಲಕ ಒಪ್ಪಿಸಬೇಕು.

**<u>ಕಾವೇರಿ ಜಲ ವಿವಾದದ ವಿಚಾರ</u>**

ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ನೊಂದಾಯಿಸಲು ಭಾರತದ ಸರ್ವೋಚ್ಚ ನ್ಯಾಯಾಲಯ ಫೆಬ್ರವರಿ 20ರ ಗಡವು ನೀಡಿದೆ. **ದೇಶದಲ್ಲಿ ನೀರಿನ ವಿಚಾರ ಅತೀವ ಸೂಕ್ಷ್ಮದ್ದಾಗಿದ್ದು, ರಾಜಕೀಯ ಮಹತ್ವ ಪಡೆದಿದೆ. ಈ ವಿಚಾರದಲ್ಲಿ ತೆಗೆದುಕೊಳ್ಳುವ ನಿರ್ಣಯದಿಂದ ಅಂತರ ರಾಜ್ಯ ಸಂಬಂಧಗಳು ಹದಗೆಡುವ ಸಾಧ್ಯತೆಯಿರುವುದರಿಂದ ಯುಪಿಎ ಸರ್ಕಾರ ಜಾಗೃತೆ ವಹಿಸಿ ಮುನ್ನಡೆಯಬೇಕು. ಅಂತಿಮ ತೀರ್ಪನ್ನು ನೊಂದಾಯಿಸುವ ಮುನ್ನ ತಮಿಳುನಾಡು ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳನ್ನು ಕರೆಸಿ ಸರ್ವಸಮ್ಮತವಾದ ಪರಿಹಾರ ಹುಡುಕುವ ಯತ್ನವನ್ನು ಪ್ರಧಾನಮಂತ್ರಿಗಳು ಮಾಡಬೇಕಾಗಿದೆ.**

ಕಾವೇರಿ ಜಲ ವಿವಾದ ನ್ಯಾಯಾಧಿಕರಣ ತೀರ್ಪು ಫೆಬ್ರವರಿ 05,2007ರಂದು ನೀಡಿದ ನಂತರ ಆರು ವರ್ಷಗಳು ಗತಿಸಿವೆ. ಕೇಂದ್ರದ ಜವಾಬ್ದಾರಿ ಹೊತ್ತಿರುವ ಸರ್ಕಾರ ಈ ಸಮಸ್ಯೆ ಬಗೆಹರಿಸಲು ಮೊದಲ ಆಧ್ಯತೆ ನೀಡಬೇಕು.

**<u>ಭಾರತದಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ ಅಸಹನೆ</u>**

ಕೆಲವು ಸಾಂಸ್ಕೃತಿಕ ವಿಚಾರಗಳ ಕುರಿತು ಇತ್ತೀಚೆಗೆ ಆವರಿಸಿರುವ ವಿವಾದಗಳು ಭಾಜಪ ಪಕ್ಷಕ್ಕೆ ಆತಂಕದ ವಿಚಾರಗಳಾಗಿವೆ. ವಿಭಿನ್ನ ಹಾಗೂ ಹೊಸ ಆಲೋಚನೆಗಳಿಗೆ ಅವಕಾಶ ನೀಡುವ ಸಾಧ್ಯತೆಗಳನ್ನು ವಿರೋಧಿಸುವ ಮೂಲಕ ಭಾರತವನ್ನು ಅಸಹಿಷ್ಣುತೆಯ ಸಮಾಜವಾಗಿ ಪರಿವರ್ತಿಸುವ ಭೀತಿ ಎದುರಾಗಿದೆ.

**ಚಲನಚಿತ್ರಗಳು, ಸಂಗೀತ, ಪುಸ್ತಕಗಳು ಹಾಗೂ ಅನ್ಯ ಬಗೆಯ ಸೃಜನಾತ್ಮಕ ಸಾರ್ವಜನಿಕ ಉಪನ್ಯಾಸದ ಮಾಧ್ಯಮಗಳು ಪರ್ಯಾಯ ಆಲೋಚನೆಗಳ ಸಂವಹನಕ್ಕೆ ಉಪಯುಕ್ತ ಮಾರ್ಗಗಳಾಗಿರುವ ಕಾರಣ ಅವುಗಳನ್ನು ಪೋಷಿಸುವ ಅವಕಾಶ ಕಲ್ಪಿಸಬೇಕು.** ಆಂತಹ ಯಾವುದೇ ವಿಚಾರಗಳನ್ನು ವಿರೋಧಿಸುವವರು ಪ್ರತಿಭಟಿಸುವ ಹಕ್ಕು ಹೊಂದಿರುವರೇ ಹೊರತು, ದುರ್ವರ್ತನೆ, ಬೆದರಿಕೆ ಹಾಗೂ ಹಿಂಸಾತ್ಮಕ ಕೃತ್ಯಗಳನ್ನು ಮಾಡುವಂತಿಲ್ಲ.

**ಭಾರತದ ಸಂವಿಧಾನವು ಅಭಿವ್ಯಕ್ತಿ ಸ್ವಾತಂತ್ರ್ಯದ ಅಭಯ ನೀಡಿದ್ದರೂ ಅದೊಂದು ಅಪರಿಮಿತ ಸ್ವಾತಂತ್ರ್ಯವಾಗಿರದೆ ಜವಾಬ್ದಾರಿಯ ಮನೋಧರ್ಮದಿಂದ ಕೂಡಿದೆ. ಸಮುದಾಯದ ಗುರುತುಗಳು ಪ್ರಮುಖವೆನಿಸಿದ್ದು, ಅದರ ಕೋಮಲ ಭಾವನೆಗಳನ್ನು ಉದ್ದೇಶಪೂರ್ವಕವಾಗಿ ನೋಯಿಸುವುದು ಸರಿಯಲ್ಲ. ದುರಾದೃಷ್ಟವಶಾತ್, ಹಲವು ಸಮುದಾಯ ವೃಂದಗಳು ಇದರ ದುರಪಯೋಗ ಪಡಿಸಿಕೊಂಡು ಕಲೆ ಹಾಗೂ ಸಂಸ್ಕೃತಿಯ ವಿಚಾರದಲ್ಲಿ ಸಂಭವಿಸುವ ಅರೋಗ್ಯಕರ ಚರ್ಚೆಗೆ ತೊಡಕುಂಟು ಮಾಡುವ ಯತ್ನಗಳು ಈ ದೇಶದಲ್ಲಿ ನಡೆಯುತ್ತಿವೆ.**

ಸಾಂಸ್ಕೃತಿಕ ವಿಚಾರಗಳಲ್ಲಿ ಹೆಚ್ಚುತ್ತಿರುವ ಅಸಹನೆಯ ಕುರಿತು ಪ್ರಜ್ಞಾವಂತ ಸಾರ್ವಜನಿಕ ಚರ್ಚೆ ಏರ್ಪಡಿಸುವ ಅಗತ್ಯವಿದೆ. ಕಲೆ, ಸಂಸ್ಕೃತಿ ಹಾಗೂ ಸಂಗೀತದ ವಿಚಾರದಲ್ಲಿ ಭಾರತ ಹಲವಾರು ಶತಮಾನಗಳಿಂದ ಸಹಿಷ್ಣುತೆಯ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸಿದೆ. ಭಾರತದ ಸಾಂಪ್ರದಾಯಿಕ ಮತ್ತು ಪ್ರಗತಿಪರ ಆಲೋಚನೆಗಳನ್ನು ಪ್ರತಿಪಾದಿಸುವ ಸಮಯ ಮತ್ತೊಮ್ಮೆ ಒದಗಿಬಂದಿದೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ